ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ15-12-2025 ರಂದು ಬೋಧಿಸಲಾಯಿತು.

<u>ಮಧ್ಯಂತರ ಅರ್ಜಿ ಸಂಖ್ಯೆಃ 9 ರ ಮೇಲಿನ ಆದೇಶದ ಮೇರೆಗೆ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಕೆ ಜಿ ವಕೀಲರಿಂದಃ</u>

1. ನಾನು ಸಲ್ಲಿಸಿರುವ ನಿಶಾನೆ ಸಿ-1 ಕಮಿಷನರ ವರದಿ ಸರಿಯಿರುತ್ತದೆ. ದಾವಾಸ್ತಿ ಸ.ನಂ. 104/1 ರಲ್ಲಿ 1 ಗುಂಟೆ 8 ಆಣೆ ಬ-ಖರಾಬ ಇರುತ್ತದೆ. ಸಾಕ್ಷಿಯು ಎಂತಲೂ ಒಂದುದಾಖಲೆಯನ್ನು ತೋರಿಸಿದ್ದು ಸದ್ರಿ ದಾಖಲೆಯು ದಾವಾ ಸರ್ವೆ ನಂ. 104 ರ ಖರಾಬಿನ ಉತಾರ ದೃಡಿಕೃತ ಪ್ರತಿಯನ್ನು ತೋರಿಸಿದ್ದು ಅದನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಹಾವಿನಬೀಳು ಮುಖ್ಯ ರಸ್ತೆಯಿಂದ ಪ್ರತಿವಾದಿಯರ ಮನೆಗೆ ಇರುವ ಪ್ರೈವಾಟೆ ರಸ್ತೆಯು ಸುಮಾರು 100 ಅಡಿ ಉದ್ದ 10 ಅಡಿ ಅಗಲ ಇರುತ್ತದೆ. ಸದ್ರಿ ರಸ್ತೆಯು 15 ಅಡಿ ಅಗಲ ಇರುತ್ತದೆ ಎಂದರೇ ಸರಿಯಲ್ಲ.

2. ಪ್ರತಿವಾದಿಯರ ಮನೆಯ ವಾದಿಯರು ಮನೆಗಿಂತ ಮೇಲೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯರ ಮನೆಯ ಮುಂಭಾಗ ರಸ್ತೆಯ ಮೂಲಕ ವಾದಿಯರ ಮನೆಗೆ ಹೋಗಬೇಕಾಗುತ್ತದೆ ಎಂದರೆ ಸರಿ. ಪ್ರತಿವಾದಿಯರ ಮನೆಯ ಮುಂಭಾಗದ ರಸ್ತೆಯು ವಾದಿಯರ ಮನೆಯವರೆಗೆ ಕಿರಿದಾಗಿರುತ್ತದೆ ಎಂದರೆ ಸರಿ. ಸದ್ರಿ ರಸ್ತೆಗೆ ಪ್ರತಿವಾದಿಯರು ಕೆಂಪು ಇಟ್ಟಿಗೆ ಕಟ್ಟಿದ್ದರಿಂದ ಸದ್ರಿ ರಸ್ತೆಯು ಕಿರಿದಾಗಿರುತ್ತದೆ ಎಂದರೆ ಸರಿ. ಸದ್ರಿ ರಸ್ತೆಯನ್ನು ಹೊರತುಪಡಿಸಿ ವಾದಿಯರ ಮನೆಗೆ ಹೋಗಲು ಬೇರೆ ಯಾವುದೇ ರಸ್ತೆ ಇರುವುದಿಲ್ಲ. ಸದ್ರಿ ರಸ್ತೆಯ ಅಗಲ ಕಡಿಮೆ ಮಾಡಿರುವುದರಿಂದ ಸದ್ರಿ ರಸ್ತೆಯಲ್ಲಿ ಯಾವುದೇ ವಾಹನಗಳು ವಾದಿಯರ ಮನಗೆ ಓಡಾಡುವುದಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**